1822(2323) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್): ಮಾನ್ಯ ಕೈಗಾರಿಕೆ ಮತ್ತು ಮೂಲ ಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ–ಮಂಗಳೂರು ರೈಲು ಮಾರ್ಗದ ಹಳಿ ಪರಿವರ್ತನೆ ಕಾಮಗಾರಿ ಯಾವ ಹಂತದಲ್ಲಿದೆ;

ಆ) ಹಳಿ ಪರಿವರ್ತನೆ ಕಾಮಗಾರಿಯ ವಿಳಂಬಕ್ಕೆ ಕಾರಣಗಳೇನು;

ಇ) ಈ ಕಾಮಗಾರಿಗಾಗಿ ಅಗತ್ಯವಿರುವ ಹಣದ ಮೊಬಲಗು ಎಷ್ಟು;

ಈ) ಹಳಿ ಪರಿವರ್ತನೆ ಕಾಮಗಾರಿಗೆ ಅಗತ್ಯವಿರುವ ಹಣದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲೆಷ್ಟು;

ಉ) ಕೇಂದ್ರ ಸರ್ಕಾರ ತನ್ನ ಪಾಲಿನ ಹಣವನ್ನು ಮಂಜೂರು ಮಾಡಿದೆಯೇ;

ಊ) ಹಾಸನ ಮಂಗಳೂರು ರೈಲು ಮಾರ್ಗದ ಹಳಿ ಪರಿವರ್ತನೆ ಕಾಮಗಾರಿ ಅತ್ಯಗತ್ಯವಾಗಿ ಆಗಬೇಕಾಗಿದ್ದು ಕಾಲಮಿತಿಯಲ್ಲಿ ಅದನ್ನು ಪೂರ್ಣಗೊಳಿಸುವಲ್ಲಿ ಸರ್ಕಾರದ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಸಕಲೇಶಪುರ ಮತ್ತು ಸುಬ್ರಮಣ್ಯ ನಡುವಿನ ಘಟ್ಟ ಪ್ರದೇಶದಲ್ಲಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಆ) ಈ ಮಾರ್ಗದಲ್ಲಿ 1997ರಲ್ಲಿ ಗೇಜು ಪರಿವರ್ತನೆ ಕಾಮಗಾರಿ ಪ್ರಾರಂಭಿಸಲಾಗಿದ್ದು, ಅವಶ್ಯವಿರುವ ಅನುದಾನವಿಲ್ಲದೆ ವಿಳಂಬವಾಗಿದೆ. ವಿಶೇಷ ಉದ್ದೇಶಿತ ಸಂಸ್ಥೆಯಾದ ಹಾಸನ–ಮಂಗಳೂರು ರೈಲು ಅಭಿವೃದ್ಧಿ ನಿಗಮ ಎಂಬ ಕಂಪನಿಯನ್ನು 2003ರಲ್ಲಿ ರಚಿಸಿದ್ದು ಈ ಯೋಜನೆಗೆ ಹಣ ಒದಗಣೆ ಮಾಡಲಾಗಿದ್ದು, ಆದಷ್ಟು ಬೇಗನೆ ಕಾಮಗಾರಿ ಪೂರ್ಣಗೊಳಿಸುವ ನಿರೀಕ್ಷೆ ಇದೆ.

ಇ) ಯೋಜನೆ ಅಂದಾಜು ವೆಚ್ಚ ರೂ.291 ಕೋಟಿಗಳು.

ಈ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು HMRDC ಕಂಪನಿಯಲ್ಲಿ ಒಟ್ಟು ಈಕ್ವಿಟಿ ಮೊತ್ತ ರೂ. 90 ಕೋಟಿಗಳಲ್ಲಿ ಸಮಪಾಲು ತಲಾ ರೂ. 45 ಕೋಟಿಗಳ ಈಕ್ವಿಟಿ ಹೊಂದಿವೆ.

ಉ) ಹೌದು.

ಊ) ರಾಜ್ಯ ಸರ್ಕಾರವು ಈಗಾಗಲೇ ತನ್ನ ಪಾಲಿನ ರೂ.28 ಕೋಟಿಗಳನ್ನು ಬಿಡುಗಡೆ ಮಾಡಿದೆ ಮತ್ತು ಈ ಕಾಮಗಾರಿಯನ್ನು 2005ರ ಮಧ್ಯಭಾಗದಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

1823(2324) ಶ್ರೀ ಕೃಷ್ಣಪಾಲೇಮಾರ್ ಜೆ.: ಮಾನ್ಯ ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುರತ್ಕಲ್ ಪ್ರದೇಶದ ಬೈಕಂಪಾಡಿ ಗ್ರಾಮದಲ್ಲಿ ಬಿ.ಪಿ.ಸಿ.ಎಲ್. ಮತ್ತು ಹೆಚ್.ಪಿ.ಸಿ.ಎಲ್. ಮತ್ತಿತರ ಸಂಸ್ಥೆಗಳಿಗೆ ಸ್ವಾಧೀನಪಡಿಸಿಕೊಟ್ಟ ಭೂಮಾಲೀಕರಿಗೆ ಭೂಸ್ವಾಧೀನ ಪೂರ್ವದಲ್ಲಿ ಕೊಟ್ಟ ಭರವಸೆಗಳು ಯಾವುವು?

ಆ) ಆ ಭರವಸೆಗಳನ್ನು ಕೈಗಾರಿಕಾ ಸಂಸ್ಥೆಗಳು ಈಡೇರಿಸಿವೆಯೇ?

ಇ) ಇಲ್ಲವಾದಲ್ಲಿ, ಕಾರಣಗಳೇನು?